

ಡಾ.ವಿನೋದ ಛೆಬ್ಬಿ

ಸಂವಿಧಾನದ ಕಲಮು 377 ರದ್ದತಿಯ ನಂತರ ಸಲಿಂಗಿಗಳ ಬದುಕನ್ನು ಗೌರವಿಸಲು ನಮ್ಮ ತಯಾರಿ ಏನಿದೆ?

# 188: 'ಮೋಹನ ಸ್ವಾಮಿ'ಯ ಬಗೆಗೆ

ಬಹಳ ದಿನಗಳ ನನ್ನಾಸೆ ಕೈಗೂಡಿದೆ. ಹೆಗ್ಗೋಡಿನ ನೀನಾಸಂ ಶಿಬಿರದಲ್ಲಿ ಪಾಲುಗೊಂಡಿದ್ದೇನೆ. ಮೊನ್ನೆ ವಸುಧೇಂದ್ರ ಅವರ ಕೃತಿ 'ಮೋಹನ ಸ್ವಾಮಿ' ನಾಟಕವಾಗಿ ಪ್ರದರ್ಶನಗೊಂಡಿತು. ಇದು ಸಲಿಂಗಕಾಮದ ಕುರಿತಾಗಿದೆ. ಗಂಡು ಸಲಿಂಗಿಯೊಬ್ಬ ಸಹವಾಸಿಯೊಂದಿಗೆ ಇರುವ ಪ್ರೇಮಕಾಮದ ಸಂಬಂಧವನ್ನು ಹಂತಹಂತವಾಗಿ ಕಳೆದುಕೊಳ್ಳುತ್ತ ಭಗ್ನಭಾವನೆಗಳ ಗೋರಿ ಕಟ್ಟಿಕೊಳ್ಳುವುದು ಇದರ ಕಥಾವಸ್ತು. ಪ್ರಿಯತಮನು 'ಮದುವೆ' ಎಂಬ ವ್ಯವಸ್ಥೆಗೆ ಒಗ್ಗೊಟ್ಟು ಕ್ರಮೇಣ ದೂರವಾಗುತ್ತಿರುವಾಗ ನಾಯಕನಿಗೆ ಆಗುವ ಚಿತ್ರಹಿಂಸೆಯ ಎಳೆಎಳೆಯನ್ನೂ ಹಿಂಜಿದಂತಿತ್ತು. ಮಹಾದೇವ ಹಡಪದ ಅವರ ಪಾತ್ರವು ಮನಸ್ಸನ್ನೂ ಕರುಳನ್ನೂ ಒಟ್ಟಿಗೇ ಭೇದಿಸುವಂತಿತ್ತು. ಸಲಿಂಗೀಯರ ಭಾವನೆಗಳನ್ನು ಸಮಾಜವು ದುರ್ಲಕ್ಷ್ಯದಿಂದ ಕಾಣುತ್ತಿರುವುದಕ್ಕೆ ಕನ್ನಡಿ ಹಿಡಿಯುವ ಅದ್ಭುತ ಪ್ರಯೋಗವಿದು.

ಕಲಮು 377ನ್ನು ಝಳಪಿಸಿ ಸಲಿಂಗ ಸಂಬಂಧವನ್ನು ಶಿಕ್ಷಾರ್ಹ ಅಪರಾಧ ಎನ್ನುತ್ತಿದ್ದ ಸರ್ವೋಚ್ಚ ನ್ಯಾಯಾಲಯವು ಈಚೆಗೆ ಅದನ್ನು ರದ್ದುಗೊಳಿಸಿದೆ. ಅಲ್ಲದೆ, ತಾನು ಮಾಡಿದ 'ಕಾನೂನುಬದ್ಧ ಅನ್ಯಾಯ'ದ ಬಗೆಗೆ ಲೈಂಗಿಕ ಅಲ್ಪಸಂಖ್ಯಾಕರ ಕ್ಷಮೆಯನ್ನು ಕೂಡ ಕೇಳಿದೆ! ಈ ತೀರ್ಪಿನ ಬೆಳಕಿನಲ್ಲಿ ಸಲಿಂಗಕಾಮದ ಬಗೆಗೆ ಇನ್ನಷ್ಟು ಸ್ಪಷ್ಟತೆ ನಮಗೆ ಅಗತ್ಯವಾಗಿದೆ.

ಸಲಿಂಗಿಗಳು ತಮ್ಮದೇ ಆದ ಲಿಂಗದವರನ್ನು ಪ್ರೇಮಿಸುವುದು ಕಾಮಿಸುವುದು ಹೆಣ್ಣುಗಂಡುಗಳ ನಡುವಿನ ಸಂಬಂಧದಷ್ಟೇ ಸಹಜ ಹಾಗೂ ಪ್ರಕೃತಿದತ್ತ ಎಂಬುದನ್ನು ಸಾಕಷ್ಟು ಲೇಖನಗಳಲ್ಲಿ ಒತ್ತಿಹೇಳಿದ್ದೇನೆ. ಸಮಾಜವನ್ನು ಎದುರಿಸಲಾಗದೆ ಮದುವೆಯಾಗಿ ಸಲಿಂಗಿಗಳು ಅನುಭವಿಸುವ ನರಕ ಯಾತನೆಯನ್ನು 'ಸಲಿಂಗಿಯ ದಾಂಪತ್ಯ' ಲೇಖನದಲ್ಲಿ (ನೋಡಿ ಕಂತು: 113–115) ವಿವರಿಸಿದ್ದೇನೆ. ಕಾಕತಾಳೀಯ ಎನ್ನುವಂತೆ ಕಳೆದ ವಾರವಷ್ಟೇ ನಡೆದ ಇನ್ನೊಂದು ಪ್ರಸಂಗ ಇನ್ನೂ ಹಸಿರಾಗಿದೆ:

ಈ ದಂಪತಿ ಮದುವೆಯಾಗಿ ಎರಡು ವರ್ಷ. ಹೆಂಡತಿ ಲೈಂಗಿಕ ಕ್ರಿಯೆಯನ್ನು ಮೊದಲಿನಿಂದಲೂ ನಿರಾಕರಿಸುತ್ತಿದ್ದಾಳೆ. ಆಕೆಯನ್ನು 'ಸರಿಪಡಿಸುವುದಕ್ಕಾಗಿ' ನನ್ನಲ್ಲಿ ಹೆಚ್ಚುಕಡಿಮೆ ಎಳೆದೇ ಕರೆತರಲಾಗಿದೆ. ಜೊತೆಗೆ ಗಂಡ, ಅತ್ತೆ, ತಾಯಿ ಇದ್ದಾರೆ. ಹುಡುಗಿಯ ಮುಖ ನೋಡಬೇಕು ನೀವು. ದೈನ್ಯತೆಯ ಬದಲು ದಿಟ್ಟತನ ಇದೆ! ಸಂದರ್ಶನದ ಪ್ರಾರಂಭದಲ್ಲೇ ಏಕಾಂತದಲ್ಲಿ ಹೇಳಿಕೊಂಡಿದ್ದಾಳೆ. ಏನದು? ಆಕೆ ಸಲಿಂಗಕಾಮಿ. ಆಕೆಯ ಬವಣೆಯೇನು?

ಹುಡುಗಿ ತನ್ನ ಪ್ರವೃತ್ತಿಯನ್ನು ಹೇಳಿಕೊಂಡಾಗ ತವರಿನವರಿಂದ ಶಿಕ್ಷೆಗೆ ಒಳಗಾಗಿದ್ದಾಳೆ. ಸ್ವಾಮೀಜಿಯೊಬ್ಬರು 'ಇವಳ ಶರೀರದಲ್ಲಿ ಹುಡುಗನ ಆತ್ಮ ಸೇರಿಕೊಂಡಿದೆ' ಎಂದಿದ್ದಾರೆ. ಇವರೇನು ಅರ್ಥಮಾಡಿಕೊಂಡರೋ ಗೊತ್ತಿಲ್ಲ, ಹುಡುಗನ ಆತ್ಮವನ್ನು ತೆಗೆಸುವ ಯತ್ನದಲ್ಲಿ ಹುಡುಗಿಯು ಮಂತ್ರವಾದಿಯಿಂದ ಬೇವಿನ ಛಡಿಯ ಏಟು ತಿನ್ನಬೇಕಾಯಿತು. ತವರಿನವರ ಹಿಂಸೆಯನ್ನು ತಪ್ಪಿಸಿಕೊಳ್ಳಲು ಗಂಡನೊಡನೆ ವಾಸಿಸುತ್ತಿದ್ದಾಳೆ. ಗಂಡನೇನೋ ಒಳ್ಳೆಯವ. ದೇಹಸುಖಕ್ಕಾಗಿ ಒತ್ತಾಯಿಸಿ ಸಾಕಾಗಿ, ವಿಚ್ಛೇದನ ನೀಡಲು ತಯಾರಾಗಿದ್ದಾನೆ. ಆದರೆ ಆಕೆಯ ಕಡೆಯವರೇ ಬಿಡುತ್ತಿಲ್ಲ.

ಇಲ್ಲಿ ನನ್ನ ಪಾತ್ರ ನೇರವಾಗಿತ್ತು. ಎಲ್ಲರ ಎದುರು ಸತ್ಯವನ್ನು ಮುಂದಿಟ್ಟೆ. ಇವರಿಬ್ಬರೂ ಸ್ನೇಹಿತರು ಆಗಬಹುದಷ್ಟೇ ವಿನಾ ಲೈಂಗಿಕ ಸಂಗಾತಿಗಳಾಗಲು ಅಸಾಧ್ಯವೆಂದು ಸ್ಪಷ್ಟಪಡಿಸಿದೆ. ಹುಡುಗನ ತಾಯಿಯ ಪ್ರತಿಕ್ರಿಯೆ: 'ಅಯ್ಯೋ, ನನಗೆ ಈ ಗಂಡನೇನು, ಯಾವ ಗಂಡಸರ ಮೇಲೂ ಮನಸ್ಸು ಬರುವುದಿಲ್ಲ ಅಂತ ಸೊಸೆ ನನ್ನ ಹತ್ತಿರ ಹೇಳಿಕೊಂಡಿದ್ದಳು. ನಾನೇ ಅರ್ಥಮಾಡಿಕೊಳ್ಳಲಿಲ್ಲ!' ಎಂದು ಅತ್ತು, ಹುಡುಗಿಗೆ ಇಷ್ಟವಾದಂತೆ ಬದುಕು ನಡೆಸಲು ಅವಕಾಶ ಮಾಡಿಕೊಡುತ್ತೇನೆ ಎಂದಳು. ಆದರೆ ಹುಡುಗಿಯ ತಾಯಿ? ನಿಮಿಷಗಟ್ಟಲೆ ಶೂನ್ಯದಲ್ಲಿ ದೃಷ್ಟಿನೆಟ್ಟು ಬೆರಳು ಹೊಸೆಯುತ್ತ ಕುಳಿತಿದ್ದಳು. ವಿಚ್ಛೇದನಕ್ಕಾಗಿ ದೃಢೀಕರಣ ಪತ್ರ ಕೊಟ್ಟು ಬೀಳ್ಕೊಡುವಾಗ ಹುಡುಗನಿಗೆ ವ್ಯಥೆ, ಅವನ ತಾಯಿಗೆ ಸಮಾಧಾನ, ಹುಡುಗಿಗೆ ಜಯ, ಹುಡುಗಿ ತಾಯಿಗೆ ಕೋಲಾಹಲದ ಭಾವನೆ. ಅಂದಹಾಗೆ ವಿಚ್ಛೇದನ ಸಿಗುವ ತನಕ ಹುಡುಗಿಯು ತವರಿನಿಂದ ರಕ್ಷಣೆ ಪಡೆಯುವುದಕ್ಕಾಗಿ ಗಂಡನ ಮನೆಯಲ್ಲೇ ಇರಲು ನಿರ್ಧರಿಸಿದ್ದಾಳೆ.

ಇದೆಲ್ಲ ಯಾಕೆ ಹೇಳುತ್ತಿದ್ದೇನೆ ಎಂದರೆ, ಈ ಸಲಿಂಗಿ ಹುಡುಗಿಯಲ್ಲಿ ಒಂದು ಮಹತ್ವದ ಅಂಶವನ್ನು ಗಮನಿಸಿದೆ. ನಾನು ನೋಡಿರುವ ನೂರಾರು ಸಲಿಂಗಿ ಗಂಡಸರು ತಮ್ಮನ್ನು ತಾವು ನಂಬದೆ, ಹೆರಲಿಂಗ ಕಾಮಕ್ಕೆ ಪರಿವರ್ತಿಸಿಕೊಳ್ಳಲು ಮತ್ತೆ ಮತ್ತೆ ಸಹಾಯ ಯಾಚಿಸಿದ್ದಾರೆ. ಆದರೆ ಈಕೆ ಹೇಳುವುದೇನು? 'ನಾನು ಮದುವೆ ಮುರಿದುಕೊಂಡು ಸ್ವತಂತ್ರವಾಗಬೇಕು. ಕೆಲಸಮಾಡಿ ಹಣ ಗಳಿಸಬೇಕು. ಒಂದು ಹೆಣ್ಣನ್ನು ಕಟ್ಟಿಕೊಂಡು ಸುಖವಾಗಿರಬೇಕು.' ಕುಟುಂಬದಿಂದ ದೂರಗೊಂಡವಳ ಮುಖದಲ್ಲಿ ಲಾಸ್ಯವಾಡುವ ಆತ್ಮವಿಶ್ವಾಸ, ಆಶಾವಾದ ಬೆರಗು ತರಿಸುವಂತಿತ್ತು! ಇದೇ ಭಾವವು ಗಂಡು ಸಲಿಂಗಿಗಳಲ್ಲಿ ಯಾಕಿಲ್ಲ? ಕಾರಣ ಪುರುಷ ಪ್ರಧಾನ ವ್ಯವಸ್ಥೆಯಲ್ಲದೆ ಬೇರೇನೂ ಅಲ್ಲ! ಗಂಡು ಸಲಿಂಗಿಯನ್ನು ಗಂಡಸಲ್ಲ, ಷಂಡ, ನಪುಂಸಕ ಎಂದು ಗೇಲಿಮಾಡುವವರು ಇದ್ದಾರೆ. ವಾಸ್ತವ ಏನೆಂದರೆ, ಗಂಡು ಸಲಿಂಗಿಗಳು ಇತರ ಗಂಡುಗಳಂತೆ ಪುರುಷತ್ವದ ಎಲ್ಲ ಲಕ್ಷಣಗಳನ್ನೂ ಹೊಂದಿರುತ್ತಾರೆ. ಕಾಮಕೂಟದಲ್ಲಿ ಸ್ಖಲಿಸುತ್ತಾರೆ. ಅವರ ವೀರ್ಯದಿಂದಲೂ ಸಂತಾನ ಆಗಬಲ್ಲದು.

ಈಗ ಸಂವಿಧಾನದ ಕಲಮು 377 ರದ್ದಾದಮೇಲೆ ಮುಂದೇನು?

1) ಕಲಮಿನ ರದ್ದತಿ ಮೊದಲ ಹೆಜ್ಜೆಯಷ್ಟೆ. ಇನ್ನು ನಿಜವಾದ ಕೆಲಸ ಶುರು. ಸಲಿಂಗಿಗಳಿಗೂ ಕಾನೂನುಬದ್ಧ ಮದುವೆ, ದತ್ತು ಹಾಗೂ ಆಸ್ತಿ ಹಕ್ಕುಗಳು ಪ್ರಾಪ್ತವಾಗಬೇಕು.
2) ಶರೀರದ ಒಂದು ಅಂಗ ದುರ್ಬಲವಾಗಿದ್ದರೆ ಅದನ್ನು ಸರಿಪಡಿಸದ ಹೊರತು ಶರೀರ ಆರೋಗ್ಯಕರ ಎನ್ನಲಾಗದು. ಹಾಗೆಯೇ ಸಲಿಂಗಿಗಳ ಸಬಲೀಕರಣಕ್ಕೆ ಸೊಂಟಕಟ್ಟಿ ನಿಲ್ಲುವುದು ಆರೋಗ್ಯಕರ ಸಮಾಜಕ್ಕೆ ದಾರಿಯೆಂದು ಎಲ್ಲರೂ ಅರ್ಥಮಾಡಿಕೊಳ್ಳಬೇಕು.
3) ಜನಗಣತಿಯಲ್ಲಿ ಸಲಿಂಗಿಗಳನ್ನೂ ಲಿಂಗಾಂತರಿಗಳನ್ನೂ ಗುರುತಿಸಿ ನಮೂದಿಸುವ ಕ್ರಮ ಕೈಗೊಳ್ಳಬೇಕು. ಇದರಿಂದ ಅವರು ಧೈರ್ಯದಿಂದ ಅಸ್ತಿತ್ವವನ್ನು ಕಂಡುಕೊಳ್ಳಲು ನೆರವಾಗುತ್ತದೆ.
4) ಸಲಿಂಗಿಗಳನ್ನು ಒಪ್ಪಿಕೊಂಡರೆ ಮಾತ್ರ ಸಾಲದು, ಅವರ ಆಯ್ಕೆಗಳನ್ನು, ಬದುಕಿನ ರೀತಿಯನ್ನು – ಅರ್ಥವಾಗದಿದ್ದರೂ – ಪುರಸ್ಕರಿಸಬೇಕು. ಅವರ ವರ್ತನೆಯು ಬಹುಸಂಖ್ಯಾತರಿಗೆ ವಿಚಿತ್ರವೆಂದು ತೋರಿದರೂ ಅಲ್ಪಸಂಖ್ಯಾತರೂ ತಮ್ಮಿಷ್ಟದಂತೆ ಬದುಕುವ ಹಕ್ಕಿದೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು.
5) ಸಲಿಂಗಿಗಳ ಬಗೆಗೆ ಸಮಾಜದ ನಿಲುವು ಎಷ್ಟರ ಮಟ್ಟಿಗೆ ಬದಲಾವಣೆ ಆಗಬೇಕೆಂದು ವಸುಧೇಂದ್ರರು ಒಂದು ಕಡೆ ಹೇಳಿದ್ದಾರೆ: ಮದುವೆಗೆ ತಯಾರಾದ ಹುಡುಗನಿಗೆ ಹಿರಿಯರು ನಾನಾ ಹುಡುಗಿಯರ ಭಾವಚಿತ್ರಗಳನ್ನು ತೋರಿಸುವುದು ಇದೆಯಷ್ಟೆ? ಒಂದುವೇಳೆ ಹುಡುಗ ಸಲಿಂಗಿಯೆಂದು ಗೊತ್ತಾದರೆ ಸಲಿಂಗಿ ಗಂಡುಗಳ ಭಾವಚಿತ್ರಗಳನ್ನು ಅಷ್ಟೇ ಉತ್ಸಾಹದಿಂದ ತೋರಿಸುವಂಥ ಮನೋಭಾವ ಬರಬೇಕು!

ಲೈಂಗಿಕ ಚಿಕಿತ್ಸಕನಾಗಿ ನನ್ನಲ್ಲೂ ಬದಲಾವಣೆ ತಂದುಕೊಂಡಿದ್ದೇನೆ. ಮುಂಚೆ ಯಾರಾದರೂ ತಾನು ಸಲಿಂಗಿ ಎಂದರೆ 'ಅದು ಸಹಜ, ಚಿಂತಿಸಬೇಡಿ' ಎನ್ನುತ್ತಿದ್ದೆ. ಈಗ 'ವಾಹ್! ಧನ್ಯವಾದಗಳು! ಕೊನೆಗೂ ನಿಮ್ಮ ಗುರುತನ್ನು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದೀರಿ!' ಎಂದು ಎದ್ದುನಿಂತು ಕೈ ಕುಲುಕುತ್ತೇನೆ. ಮೋಹನಸ್ವಾಮಿ ನಾಟಕ ನೋಡಿದ ಮೇಲೆ ಇವರನ್ನು ಸಲಿಂಗಕಾಮಿ ಎನ್ನದೆ ಸಲಿಂಗಪ್ರೇಮಿ ಎಂದು ಕರೆಯಲು ನಿರ್ಧರಿಸಿದ್ದೇನೆ.

ಅಂದಹಾಗೆ, ಕಾರ್ಯಕ್ರಮದ ನಂತರ ಒಬ್ಬ ನನಗೆ ಏಕಾಂತದಲ್ಲಿ ಕೇಳಿದ: 'ಸಲಿಂಗಿಗಳು ಹುಡುಗಿಯ ಆಕರ್ಷಣೆಗೆ ಒಳಗಾಗುವಂತೆ ಮಾಡಲು ಚಿಕಿತ್ಸೆ ಯಾಕೆ ಹುಡುಕಬಾರದು?' ನಾನು 'ಗಂಡಸಾಗಿ, ತಂದೆಯಾದರೂ ತಾಯಿಯಾಗಿ ಮಕ್ಕಳಿಗೆ ಸ್ತನ್ಯಪಾನ ಮಾಡಬೇಕೆಂದು ಅಂದುಕೊಂಡಿದ್ದೇನೆ. ಅದಿನ್ನೂ ನೆರವೇರಿಲ್ಲ.' ಎಂದು ಹೇಳಬೇಕೆಂದವನು ಸುಮ್ಮನೆ ಮುಗುಳ್ನಕ್ಕೆ.

ಉಚಿತ ಸಹಾಯವಾಣಿಗೆ ಕರೆಮಾಡಿ: 8494944888